**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ., ನ್ಯಾಯಾಲಯ ಮೂಡಿಗೆರೆ**

**ಸಿ.ಸಿ.ನಂಬರ್:475/2014**

ಸಿಡಬ್ಲ್ಯೂ: 10
ಪಿಡಬ್ಲ್ಯೂ: 6

| | | |
|---|---|---|
| ಸಾಕ್ಷಿಯ ಹೆಸರು | : | ಎ.ಕೆ.ಸಂಕಪ್ಪಯ್ಯ |
| ತಂದೆಯ ಹೆಸರು | : | ಕೊಯಿ |
| ವಯಸ್ಸು | : | 65 ವರ್ಷ |
| ಉದ್ಯೋಗ | : | ನಿವೃತ್ತ ಪಿ.ಎಸ್.ಐ. |
| ವಾಸಸ್ಥಳ | : | ತೊಕ್ಕೊಟ್ಟು ಬೀರಿ, ದಕ್ಷಿಣ ಕನ್ನಡ |

ಇಂದು ದಿನಾಂಕ:12.06.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಮುಖ್ಯ ವಿಚಾರಣೆ:** ಮಾನ್ಯ ಎಪಿಪಿಯವರಿಂದ:

ನಾನು 26.01.2013 ರಿಂದ 21.06.2014 ರವರೆಗೆ ಮೂಡಿಗೆರೆ ಪೊಲೀಸ್ ಠಾಣೆ ಉಪ ನಿರೀಕ್ಷಕ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ:02.12.2013 ರಂದು ನಾನು ಠಾಣಾ ಪ್ರಭಾರದಲ್ಲಿದ್ದಾಗ, ಸಂಜೆ 04.30 ಗಂಟೆಗೆ ನ್ಯಾಯಾಲಯದ ಕರ್ತವ್ಯಕ್ಕೆ ನೇಮಿಸಿದ ಹೆಚ್.ಸಿ.103 ರವರು ನ್ಯಾಯಾಲಯದಿಂದ ಪಿ.ಸಿ.ಆರ್.388/2013 ರ ದೂರನ್ನು ಹಾಜರುಪಡಿಸಿದ್ದು, ಅದನ್ನು ಸ್ವೀಕರಿಸಿ, ನಮ್ಮ ಠಾಣಾ ಅಪರಾಧ ಸಂಖ್ಯೆ:158/2013 ರಂತೆ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿರುತ್ತೇನೆ. ನಂತರ ದೂರು ಮತ್ತು ಪ್ರಥಮ ವರ್ತಮಾನ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಕಳುಹಿಸಿರುತ್ತೇನೆ. ದಿನಾಂಕ:25.12.2013 ರಂದು ಚಾಸಾ-1 ಮತ್ತು 2 ರವರಿಗೆ ನೋಟಿಸು ನೀಡಿರುತ್ತೇನೆ. ದಿನಾಂಕ:16.01.2014 ರಂದು ಚಾಸಾ-9 ರವರಿಗೆ ಸ್ವತ್ತಿಗೆ ಸಂಬಂದಿಸಿದ ದಾಖಲಾತಿಯನ್ನು ನೀಡುವಂತೆ ಮನವಿ ನೀಡಿರುತ್ತೇನೆ. ದಿನಾಂಕ:27.04.2014 ರಂದು ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ-11 ರವರಿಗೆ ವರ್ಗಾಯಿಸಿರುತ್ತೇನೆ. ಸಾಕ್ಷಿಯು ತಾವು ಸ್ವೀಕರಿಸಿದ ಇಂಟಿಮೇಶನ್ ಲೇಟರ್ ಹಾಗೂ ದಾಖಲಿಸಿದ ಎಫ್.ಐ.ಆರ್ ಗಳು ಮತ್ತು ಅವುಗಳ ಮೇಲಿನ ತಮ್ಮ ಸಹಿಗಳನ್ನು ನೋಡಿ ಗುರುತಿಸಿದ್ದರಿಂದ, ನಿಪಿ-26 ಮತ್ತು 27 ಹಾಗೂ ಸಾಕ್ಷಿ ಸಹಿಗಳನ್ನು ನಿಪಿ-26(ಎ) ಹಾಗೂ ನಿಪಿ-27(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-20 ಹಾಗೂ ಅದರ ಮೇಲಿನ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ, ಸಾಕ್ಷಿ ಸಹಿಯನ್ನು ನಿಪಿ-20(ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು:</u>** ಆರೋಪಿ ಪರ ಶ್ರೀ ಕೆ.ಎಸ್.ಎ ವಕೀಲರಿಂದ:

1. ಚಾಸಾ-1 ಮತ್ತು 2 ರವರಿಗೆ ಪ್ರಕರಣ ಇರುವುದರಿಂದ, ಹಾಜರಾಗುವಂತ ನೋಟಿಸು ನೀಡಿದ್ದೆ. ಆ ನೋಟಿಸುಗಳಲ್ಲಿ ಯಾವ ದಿನ ಹಾಜರಾಗಬೇಕೆಂದು ತಿಳಿಸಿರಲಿಲ್ಲ. ಆ ನೋಟಿಸಿನ ಮೇರೆಗೆ ಅವರ ಹಾಜರಾಗಿದ್ದರೋ ಅಥವಾ ಇಲ್ಲವೋ ಎಂಬುದನ್ನು ಹೇಳಲು ಆಗುವುದಿಲ್ಲ. ಚಾಸಾ-1 ಮತ್ತು 2 ರವರನ್ನು ನಾನು ವಿಚಾರಣೆ ಮಾಡಿಲ್ಲ. ನಾನು ಆರೋಪಿಗೆ ನೋಟಿಸು ನೀಡಿಲ್ಲ. ನಾನು ಚಾಸಾ-9 ರವರಿಗೆ ನೋಟಿಸು ನೀಡಿರುತ್ತೇನೆ ಎಂಬುದು ಸುಳ್ಳು ಎಂದರೆ ಸರಿಯಲ್ಲ. ನೋಟಿಸು ನೀಡಿದ ನಂತರ ಮುಂದುವರೆದು ಏನು ಆಯಿತು ಎಂದು ನನಗೆ ಗೊತ್ತಿಲ್ಲ.

**<u>ಮರು ವಿಚಾರಣೆ:</u>** ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಸಹಿ/-

ಓ ಹೇ ಕೇ ಸರಿ ಇದೆ.

ಪಿ.ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಮೂಡಿಗೆರೆ